(ನೀರಾವರಿ) ಇಲಾಖೆಯ ಸಹಮತಿ ಪಡೆದು, ಮಂಜೂರು ಮಾಡಲಾಗಿತ್ತು. ಈ ಜಮೀನಿನ ಮಂಜೂರಾತಿಯನ್ನು ಸದರಿ ಸಂಘಕ್ಕೆ ರದ್ದುಪಡಿಸಿದ್ದರ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ಮುಂದಿನ ಆದೇಶವಾಗುವರೆಗೂ ಯಾರಿಗೂ ಸದರಿ ಜಮೀನನ್ನು ಮಂಜೂರು ಮಾಡಬಾರದೆಂಬ ನಿರ್ಬಂಧವಿರುತ್ತದೆ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೈರಸಂದ್ರ ಗ್ರಾಮದ ಸರ್ವೆ ನಂ.48 ಒಟ್ಟು 12.28 ಎಕರೆ ವಿಸ್ತೀರ್ಣವಿದ್ದು, ಹಿಡುವಳಿ ಜಮೀನು ಆಗಿರುತ್ತದೆ. ಆದುದರಿಂದ ಈ ಜಮೀನಿನಲ್ಲಿ ಒತ್ತುವರಿಯನ್ನು ವಕ್ಕಲೆಬ್ಬಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗೂ, ತಾವರೆಕೆರೆಯ ಸರ್ವೆ ನಂ.74ರ ಜಮೀನಿನಲ್ಲಿ ಅಕ್ರಮ ಸಾಗುವಳಿಯು ಇರುವುದಿಲ್ಲ.

ತದನಂತರ ಸರ್ಕಾರವು ತಾವರೆಕೆರೆಯ ಸರ್ವೆ ನಂ. 74ರ ಜಮೀನನ್ನು ಯಾವ ವ್ಯಕ್ತಿಗೂ ಅಥವಾ ಸಂಘ-ಸಂಸ್ಥೆಗೂ ಮಂಜೂರು ಮಾಡಿರುವುದಿಲ್ಲ. ಸಧ್ಯಕ್ಕೆ ಈ ಜಮೀನಿನ ಮಂಜೂರಾತಿಗಾಗಿ ಯಾವುದೇ ಅರ್ಜಿಗಳು ಬಂದಿರುವುದಿಲ್ಲ.

ಆದಾಗ್ಯೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತಾವರೆಕೆರೆಯ ಸರ್ವೆ ನಂ.74ರ ಜಮೀನನ್ನು ವಿಜಯ ಕಾಲೇಜು ಕೊಳಚೆ ನಿವಾಸಿಗಳ ಪುನರ್‌ವಸತಿಗಾಗಿ ಮಂಜೂರು ಮಾಡುವಂತೆ ಕಂದಾಯ ಇಲಾಖೆಯನ್ನು ಕೋರಿದ್ದು, ಕಂದಾಯ ಇಲಾಖೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಈ ಕೋರಿಕೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ತಿರಸ್ಕರಿಸುತ್ತದೆ.

ಉಪಾಧ್ಯಕ್ಷರು : ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪ. ಶ್ರೀಯುತ ಕೋಳೀವಾಡ್ ಅವರು....

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಮುಂಚಿತವಾಗಿ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಈಗ ಸಭೆ ನಡೆಯುತ್ತಿದೆ. ಕೇಂದ್ರ ರೈಲ್ವೆ ಅಯವ್ಯಯ ಅಲ್ಲಿ ಮಂಡನೆಯಾಗಿದೆ. ಕರ್ನಾಟಕಕ್ಕೆ.....

ಉಪಾಧ್ಯಕ್ಷರು : ಈಗ....

ಕೇಂದ್ರ ರೈಲ್ವೆ ಬಜೆಟ್ಟಿನಿಂದ ರಾಜ್ಯಕ್ಕೆ ಅನ್ಯಾಯದ ಪ್ರಸ್ತಾಪ.

ಶ್ರೀ ವಾಟಾಳ್ ನಾಗರಾಜ್ : ವಿಚಾರ ಏನೆಂದರೆ ಇದು ಅತ್ಯಂತ ಮುಖ್ಯವಾದುದು. ಕರ್ನಾಟಕಕ್ಕೆ ಒಂದು ಅನುಕೂಲವೂ ಆಗಿಲ್ಲ. ಒಂದು ಹೊಸ ಲೈನ್ ಇಲ್ಲ. ಚಾಮರಾಜನಗರ ಮೆಟ್ಟುಪಾಳ್ಯ ರೈಲು ಇಲ್ಲ. ಬ್ರಾಡ್‌ಗೇಜ್‌ಗೆ ಹಣ ಕೊಟ್ಟಿಲ್ಲ. ಬೆಂಗಳೂರು ಉತ್ತರ ರೈಲ್ವೆ ಇಲ್ಲ. ನೈರುತ್ಯ ರೈಲ್ವೆ ಇಲ್ಲ. ಕರ್ನಾಟಕವನ್ನು ಕೇಂದ್ರದವರು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಇದರಿಂದ ನನಗೆ ಅತ್ಯಂತ ನೋವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕೇಂದ್ರಸರ್ಕಾರಕ್ಕೆ ಹೇಳಿದ್ದೀರಾ? ಅಥವಾ ಎಚ್ಚರಿಕೆ ತರುತ್ತೀರಾ ಎಂಬುದನ್ನು ಈ ಸಭೆಯಲ್ಲಿ ತಾವು ಹೇಳಬೇಕು. ಏಕೆಂದರೆ ಇದು ಅತ್ಯಂತ ಮುಖ್ಯವಾದುದು. ಏಕೆಂದರೆ ನಾನು ಈಗತಾನೆ ನೋಡಿಕೊಂಡು ಬಂದೆ. ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ಒಂದು ಚೂರೂ ಇಲ್ಲ. ನೋಡಿದೆ ನಾನು. ನಾನು ಹೇಳುತ್ತಿದ್ದೇನೆ, ನಮ್ಮ ರಾಜ್ಯದವರೇ ರೈಲ್ವೆ ಮಂತ್ರಿಗಳು. ಈ ರಾಜ್ಯದವರೇ ಮೊದಲಿಂದ ಆರು ಜನ ರೈಲ್ವೆ ಬಗ್ಗೆ ಒಂದೇ ಸಮನೆ ನಾವು ಹೋರಾಟ ಮಾಡಿದ್ದೇವೆ. ಇದರ ಬಗ್ಗೆ ನಾನು ಸಂಕಟದಿಂದ ಹೇಳುತ್ತಿದ್ದೇನೆ. ಕರ್ನಾಟಕವನ್ನು ಕಡೆಗಣಿಸಿದ್ದಾರೆ. ಕರ್ನಾಟಕವನ್ನು ಕೇಂದ್ರ ಸರ್ಕಾರ ಮಲತಾಯಿ ಧೋರಣೆಯಿಂದ ನೋಡುತ್ತಿದೆ. ಯಾವ ಕಾರಣಕ್ಕೋಸ್ಕರ ಈ ಅನ್ಯಾಯ ಮಾಡುತ್ತಿದ್ದಾರೆ ಎಂದು ನಾನು ತಮಗೆ ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷಣೆಯವರೆ, ಈ ಸದನದ ಮುಖಾಂತರ ಪ್ರತಿಭಟನೆಯನ್ನಾದರೂ ಸಲ್ಲಿಸೋಣ.

ಶ್ರೀ ವಾಟಾಳ್ ನಾಗರಾಜ್ : ಕೇಂದ್ರ ಸರ್ಕಾರದ ರೈಲ್ವೆ ಧೋರಣೆ, ಕರ್ನಾಟಕದ ಮೇಲೆ ಅವರು ತಾಳುತ್ತಿರುವ ಮಲತಾಯಿ ಧೋರಣೆ ಮತ್ತು ಅವರ ನೀತಿ ವಿರುದ್ಧ ನಾನು ತೀವ್ರವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದೇನೆ.

ಉಪಾಧ್ಯಕ್ಷರು : ಇದು ಕೇಂದ್ರ ಸರ್ಕಾರದ ಒಂದು ವಿಷಯ ಅದಿನ್ನೂ ಬರುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸದನದ ಮುಖಾಂತರ ಪ್ರತಿಭಟನೆಯನ್ನು ಸಲ್ಲಿಸೋಣ.

ಉಪಾಧ್ಯಕ್ಷರು : ಅದಿನ್ನೂ ಬರುತ್ತಿದೆ. ಈಗ ಕೋಳಿವಾಡ್ ಅವರು..

ಶ್ರೀ ವಾಟಾಳ್ ನಾಗರಾಜ್ : ನಮಗೆ ಚಾಮರಾಜನಗರ ಮೆಟ್ಟುಪಾಳ್ಯ ರೈಲು ಇಲ್ಲ, ಬ್ರಾಡ್‌ಗೇಜ್ ಇಲ್ಲ, ಕನ್ನಡಿಗರಿಗೆ ಉದ್ಯೋಗ ಇಲ್ಲ, ರೈಲ್ವೆ ಇಲಾಖೆಯಲ್ಲಿ ನಮ್ಮನ್ನು ಕೇಳುವವರು ಗತಿ ಇಲ್ಲ, ಕೇಂದ್ರದ ಈ ನೀತಿಯ ವಿರುದ್ಧ ಪ್ರತಿಭಟಿಸಿ ಧರಣಿ ಮಾಡುತ್ತಿದ್ದೇನೆ ನಾನು. ಇದು ಸರಿಯಿಲ್ಲ, ಸಭೆ ನಡೆಸುತ್ತಿದ್ದೇವೆ. ಈ ಬಗ್ಗೆ ಇಲ್ಲಿ ಸರ್ಕಾರ ಒಂದು ನಿರ್ಣಯ ಮಾಡಬೇಕು.

ಉಪಾಧ್ಯಕ್ಷರು : ಅಲ್ಲಿ ರೈಲ್ವೆ ಬಜೆಟ್ ಇನ್ನೂ ಪೂರ್ಣ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ನೋಡಿಕೊಂಡು ಬಂದೆ. ಒಂದು ನಯಾಪೈಸೆ ಅನುಕೂಲವೂ ಇಲ್ಲ. ಕೇಂದ್ರದ ವಿರುದ್ಧ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಒಂದು ನಿರ್ಣಯ ಮಾಡಬೇಕು ಈ ಸಭೆಯಲ್ಲಿ ಅನ್ಯಾಯ ಮಾಡಿದ್ದಾರೆ ಎಂದು.

ಉಪಾಧ್ಯಕ್ಷರು : ಈಗ ಶ್ರೀಯುತ ಕೋಳೀವಾಡ್ ಅವರು...

(ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತಿದ್ದರು)

ಶ್ರೀ ಕೆ.ಬಿ. ಕೋಳೀವಾಡ್ : ಸನ್ಯಾನ್ಯ ಅಧ್ಯಕ್ಷಣೆಯವರೆ,..

ಶ್ರೀ ಕೆ.ಎಸ್. ಈಶ್ವರಪ್ಪ : ರಾಜ್ಯದ ಜನತೆ ಪರವಾಗಿ ಕೇಂದ್ರ ಸರ್ಕಾರ ಮಾಡಿರುವ ಅನ್ಯಾಯವನ್ನು ಪ್ರತಿಭಟನೆ ಮಾಡಬೇಕು.

ಉಪಾಧ್ಯಕ್ಷರು : ಕೋಳೀವಾಡ್ ಅವರೇ, ತಾವು ನಿರ್ಣಯ ಮೂವ್ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಪ್ರತಿಭಟನೆ ತೋರಿಸೋಣ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣ ಪ್ರಸ್ತಾವ

+ ಶ್ರೀ ಕೆ.ಬಿ. ಕೋಳೀವಾಡ್ (ರಾಣೆಬೆನ್ನೂರು) : ಮಾನ್ಯ ಅಧ್ಯಕ್ಷಣೆಯವರೆ, ಫೆಬ್ರವರಿ 21, 1992ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭಾ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಲು ತಮ್ಮ ಅಪ್ಪಣೆ ಕೋರುತ್ತೇನೆ.